ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE : 06/09/2021

### ಇನ್ನೂ ಇತ್ಯರ್ಥಗೊಂಡಿಲ್ಲ ಕಳೆದ ಚುನಾವಣೆ ಫಲಿತಾಂಶದ ತಕರಾರು ಅರ್ಜಿ

# ಮಸ್ಕಿಗೆ ಈ ಬಾರಿಯೂ ಉಪಚುನಾವಣೆ ಡೌಟ್

**ಜಗನ್ನಾಥ.ಆರ್.ದೇಸಾಯಿ** ರಾಯಚೂರು
jagannath.r@ timesgroup.com

ವಿಧಾನಸಭಾ ಉಪಚುನಾವಣೆ ಘೋಷಣೆ ಸನ್ನಿಹಿತವಾಗಿದೆಯಾದರೂ ಈ ಬಾರಿಯೂ ಮಸ್ಕಿ ಕ್ಷೇತ್ರಕ್ಕೆ ಎಲೆಕ್ಷನ್ ನಡೆಯುವುದು ಅನುಮಾನ.

2018ರ ವಿಧಾನಸಭೆ ಚುನಾವಣೆಯಲ್ಲಿ ಮಸ್ಕಿ ಎಸ್‌ಟಿ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರತಾಪಗೌಡ ಪಾಟೀಲ್ ಅವರು ಬಿಜೆಪಿಯ ಆರ್. ಬಸನಗೌಡ ತುರುವಿಹಾಳ ವಿರುದ್ಧ ಕಡಿಮೆ ಅಂತರದಲ್ಲಿ ಗೆದ್ದಿದ್ದರು. ಇದನ್ನು ಪ್ರಶ್ನಿಸಿ ಬಸನಗೌಡ ಅವರು ನ್ಯಾಯಾಲಯಕ್ಕೆ ಮೊರೆ ಹೋಗಿದ್ದರು. ಈ ನಡುವೆ, ಪ್ರತಾಪಗೌಡ ಪಾಟೀಲ್ ಅವರು ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದ್ದರು. ಆಗ ಸದಸ್ಯತ್ವ ಅನರ್ಹಗೊಂಡಿತ್ತು. ಈ ನೆಲೆಯಲ್ಲಿ ಉಪಚುನಾವಣೆ ನಡೆಸಲು ಕೋರ್ಟ್ ಪ್ರಕರಣ ಅಡ್ಡ ಬಂದಿತ್ತು. ಈಗ ಮತ್ತೊಮ್ಮೆ ಉಪಚುನಾವಣೆಯ ಸದ್ದು ಕೇಳಿದರೂ ಮಸ್ಕಿ ದೂರ ಉಳಿಯುವ ಸಾಧ್ಯತೆಯೇ ಹೆಚ್ಚು.

ಬಿಜೆಪಿ ಸೇರಿ ಮಂತ್ರಿಯಾಗುವ ಕನಸು ಕಂಡಿದ್ದ ಪ್ರತಾಪಗೌಡ ಪಾಟೀಲರಿಗೆ ಶಾಸಕರಾಗಲೂ ಕಾಯಬೇಕಾದ ಪರಿಸ್ಥಿತಿ ಇದೆ. ಬಿಜೆಪಿ ಚುನಾವಣೆ ಅಕ್ರಮ ಅರ್ಜಿಯನ್ನು ಹಿಂದಕ್ಕೆ ಪಡೆಯುವಂತೆ ಬಸನ ಗೌಡ ಅವರಿಗೆ ತಿಳಿಸಿದೆ. ಆದರೆ, ನ್ಯಾಯಾಲಯವೇ ಅದನ್ನು ಆಕ್ಷೇಪಿಸಿದೆ!



**2018ರ ಫಲಿತಾಂಶ**

**ಪ್ರತಾಪಗೌಡ ಪಾಟೀಲ್** ಕಾಂಗ್ರೆಸ್
**60,387**

**ಬಸನಗೌಡ ತುರುವಿಹಾಳ** ಬಿಜೆಪಿ
**60,174**

ಗೆಲುವಿನ ಅಂತರ **213**



## ಇನ್ನೂ ನಡೆಯುತ್ತಿದೆ ವಿಚಾರಣೆ

213 ಮತಗಳ ಸೋಲಿಗೆ ಪ್ರತಾಪಗೌಡ ಪಾಟೀಲ್ ಅವರು ಅಕ್ರಮ ಎಸಗಿದ್ದೇ ಕಾರಣ ಎಂದು ಆರೋಪಿಸಿ ಬಿಜೆಪಿಯ ಬಸನಗೌಡ ಸಲ್ಲಿಸಿದ್ದ ಅರ್ಜಿ ಇನ್ನೂ ಕೋರ್ಟ್‌ನಲ್ಲಿದೆ. ಈ ಅರ್ಜಿ ವಿಚಾರಣೆಯ ಹಂತದಲ್ಲೇ ಕಾಂಗ್ರೆಸ್‌ನಲ್ಲಿದ್ದ ಪ್ರತಾಪಗೌಡ ಪಾಟೀಲ್ ಬಿಜೆಪಿ ಸೇರಿದ್ದರು. ಹೀಗಾಗಿ ಹೈಕಮಾಂಡ್ ಕೇಸ್ ವಾಪಸ್ ಪಡೆಯುವಂತೆ ಸೂಚಿಸಿತು. ಅದರಂತೆ ಅವರು ದೂರು ವಾಪಸ್ ಪಡೆಯುವುದಾಗಿ ಮನವಿ ಸಲ್ಲಿಸಿದರು. ಆದರೆ, ನ್ಯಾಯಾಲಯದಲ್ಲಿ ಮೊದಲು ದಾಖಲಿಸಲಾಗಿದ್ದ ಚುನಾವಣೆಯ ಅಕ್ರಮದ ವಿಚಾರಣೆ ಮುಂದುವರಿದಿದೆ. ಅದೇ ರೀತಿ ದೂರು ವಾಪಸ್ ಪಡೆಯುವ ನಿಟ್ಟಿನಲ್ಲಿ ಸಲ್ಲಿಸಲಾಗಿದ್ದ ಮತ್ತೊಂದು ಮನವಿಯ ಕುರಿತು ನ್ಯಾಯಾಲಯ ವಿಚಾರಣೆ ನಡೆಸಬೇಕಿದೆ.

## ಕಾಂಗ್ರೆಸ್‌ನಿಂದ ಯಾರು?



ಆದೇಶ್ ನಾಯಕ್

ಕಾಂಗ್ರೆಸ್‌ನಿಂದ ಈಗ ಯುವ ನಾಯಕ ಆದೇಶ್ ನಾಯಕ್ ಅವರ ಹೆಸರು ಓಡಾಡುತ್ತಿದೆ. ಇವರು ಸತೀಶ್ ಜಾರಕಿಹೊಳಿ ಆಪ್ತರಾಗಿದ್ದು, ಹಿಂದೆ ತೊಗರಿ ಮಂಡಳಿ ನಿರ್ದೇಶಕರಾಗಿದ್ದರು. ಕ್ಷೇತ್ರದ ತುಂಬ ಓಡಾಡಿಕೊಂಡು ತಾವೇ ಅಭ್ಯರ್ಥಿ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಇಲ್ಲಿ ಕಳೆದ ಬಾರಿ ಸಣ್ಣ ಅಂತರದಿಂದ ಗೆದ್ದಿದೆ. ಪ್ರತಾಪ್‌ಗೌಡ ಬಿಜೆಪಿ ಸೇರಿದ್ದರಿಂದ ಸಹಜವಾಗಿ ಬಲ ಸ್ವಲ್ಪ ಕುಂದಿದೆ. ಆಗರೆ, ಅವರ ಸೇರ್ಪಡೆಯಿಂದ ಬಿಜೆಪಿಯಲ್ಲಿ ಚುನಾವಣೆ ಸಂದರ್ಭದ ಏನಾದರೂ ತಲ್ಲಣ ಉಂಟಾಗಬಹುದೇ ಎಂಬ ನಿರೀಕ್ಷೆ ಕಾಂಗ್ರೆಸ್‌ನದು. ಹಾಗಂತ ತುರುವಿಹಾಳ ಅವರು ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇದ್ದಂತಿಲ್ಲ. ಆದರೆ, ಅವರು ಸೈಲೆಂಟಾಗಿದ್ದರೂ ಸಾಕಾಗುತ್ತದೆ ಎನ್ನುವುದು ಕಾಂಗ್ರೆಸ್ ಲೆಕ್ಕಾಚಾರ!

## ಚುನಾವಣೆ ಎದುರಿಸಲು ಪ್ರತಾಪಗೌಡ ಸಿದ್ಧ

ಚುನಾವಣೆ ಅಕ್ರಮ ದೂರು ವಾಪಸ್ ಪಡೆಯುವಂತೆ ಬಿಜೆಪಿ ಹೈಕಮಾಂಡ್ ಸೂಚಿಸಿದ ಬೆನ್ನಿಗೇ ಪ್ರತಾಪಗೌಡ ಪಾಟೀಲ್ ಅವರು ಮಸ್ಕಿ ಕ್ಷೇತ್ರದಲ್ಲಿ ತೆರೆಮರೆಯಲ್ಲಿ ಪರೋಕ್ಷವಾಗಿ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ. ಶಾಸಕರಾಗಿಲ್ಲದಿದ್ದರೂ ಸರಕಾರದ ಪ್ರತಿಯೊಂದೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿದ್ದು, ಕೊರೊನಾ ಸಮಯದಲ್ಲಿ ಆಹಾರದ ಕಿಟ್ ವಿತರಿಸಿದ್ದಾರೆ. ನಂದವಾಡಿಗಿ ಏತ ನೀರಾವರಿ ಯೋಜನೆಯ ಹನಿ ನೀರಾವರಿ ಯೋಜನೆಗೆ ಹಾಲಿ ಸರಕಾರದ ಅವಧಿಯಲ್ಲಿಯೇ ಚಾಲನೆ ಕೊಡಿಸುವ ಮೂಲಕ ತಾವು ಪ್ರಭಾವಿ ಎಂದು ತೋರಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಬಸನಗೌಡ ತುರುವಿಹಾಳ ಅವರನ್ನು ತುಂಗಭದ್ರಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಿಸಲಾಗಿದ್ದು, ಅವರು ಹೈಕಮಾಂಡ್ ಸೂಚನೆಯಂತೆ ಮೌನವಾಗಿದ್ದಾರೆ.